# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1675 (1935)

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಪ್ರಮುಖ ಹೂವು ಬೆಳೆಯುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಹೂವಿನ ಬೆಳೆಗಳನ್ನು ಬೆಳೆಯಲಾಗುತ್ತಿದೆ; (ಜಿಲ್ಲಾವಾರು ಮತ್ತು ಬೆಳೆವಾರು ವಿವರ ನೀಡುವುದು)</td><td>ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 20161ಹೆಕ್ಟೇರ್ ಪ್ರದೇಶದಲ್ಲಿ ಹೂವಿನ ಬೆಳೆಯನ್ನು ಬೆಳೆಯಲಾಗುತ್ತಿದೆ. ವಿವರ ಕೆಳಕಂಡಂತಿದೆ.<br>ಜಿಲ್ಲಾವಾರು ಮತ್ತು ಬೆಳೆವಾರು ವಿವರ ಈ ಕೆಳಕಂಡಂತಿದೆ.<br>(ಪ್ರದೇಶ: ಹೆಕ್ಟೇರ್ ಗಳಲ್ಲಿ)
<table>
<tr><th>ಹೂಗಳ ಹೆಸರು</th><th>ಕೋಲಾರ</th><th>ಚಿಕ್ಕಬಳ್ಳಾಪುರ</th><th>ಬೆಂಗಳೂರು ಗ್ರಾಮಾಂತರ</th><th>ಬೆಂಗಳೂರು ನಗರ</th><th>ಒಟ್ಟು</th></tr>
<tr><td>ಗುಲಾಬಿ</td><td>150</td><td>1642</td><td>2491</td><td>376</td><td>4659</td></tr>
<tr><td>ಗ್ಲಾಡಿಯೋಲಸ್</td><td>0</td><td>235</td><td>8</td><td>4</td><td>247</td></tr>
<tr><td>ಸುಗಂಧರಾಜ</td><td>24</td><td>445</td><td>259</td><td>5</td><td>733</td></tr>
<tr><td>ಮಲ್ಲಿಗೆ</td><td>4</td><td>2</td><td>0</td><td>5</td><td>11</td></tr>
<tr><td>ಚೆಂಡುಹೂವು</td><td>2275</td><td>1507</td><td>403</td><td>148</td><td>4333</td></tr>
<tr><td>ಕನಕಾಂಬರ</td><td>0</td><td>141</td><td>14</td><td>0.3</td><td>155.3</td></tr>
<tr><td>ಸೇವಂತಿಗೆ</td><td>2913</td><td>3901</td><td>2232</td><td>661</td><td>9707</td></tr>
<tr><td>ಇತರೆ</td><td>11</td><td>38</td><td>68</td><td>198.7</td><td>315.7</td></tr>
<tr><td>ಒಟ್ಟು</td><td>5377</td><td>7911</td><td>5475</td><td>1398</td><td>20161</td></tr>
</table>
</td></tr>
<tr><td>ಆ)</td><td>ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಹೂವು ಬೆಳೆಗಾರರ ದಶಕಗಳ ಬೇಡಿಕೆಯಾದ ಪ್ರತ್ಯೇಕ ಹೈಟೆಕ್ ಹೂವಿನ ಮಾರುಕಟ್ಟೆ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಕ್ರಾಸ್ ಅಂತರಾಷ್ಟ್ರೀಯ ಹೂವಿನ ಮಾರುಕಟ್ಟೆ ನಿರ್ಮಾಣಕ್ಕಾಗಿ ತೋಟಗಾರಿಕೆ ಇಲಾಖೆಯಿಂದ ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಹಸ್ತಾಂತರವಾಗಿರುವ ಸುಮಾರು 20.00 ಎಕರೆ ಜಮೀನನಲ್ಲಿ ಗ್ರಾಮೀಣ ಮಾರುಕಟ್ಟೆ ಅಭಿವೃದ್ಧಿ ನಬಾರ್ಡ್ ಯೋಜನೆಯ RIDF-31ರಡಿ ರೂ. 20.00 ಕೋಟಿಗಳ ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು ವ್ಯವಸ್ಥೆ, ವಿದ್ಯುದ್ದೀಕರಣ, ಮುಚ್ಚು ಹರಾಜುಕಟ್ಟೆ, ಶೌಚಾಲಯ ವ್ಯವಸ್ಥೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಟೆಂಡರ್ ಕರೆಯಲು ಸಹಕಾರ ಇಲಾಖೆಯಿಂದ ಕ್ರಮವಹಿಸಲಾಗಿದೆ.</td></tr>
<tr><td>ಇ)</td><td>ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಕ್ರಾಸ್ ಬಳಿ ಸುಮಾರು 46 ಎಕರೆ ಪ್ರದೇಶದಲ್ಲಿ ಹೈಟೆಕ್ ಹೂವಿನ ಮಾರುಕಟ್ಟೆ</td><td>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-90 ರಲ್ಲಿ ಘೋಷಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಸಿಒ/155/ಎಂಆರ್ ಇ/2025, ದಿನಾಂಕ: 11.07.2025 ರಲ್ಲಿ ಚಿಕ್ಕಬಳ್ಳಾಪುರ ಸಮಿತಿ ವತಿಯಿಂದ ಅಂತರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆಯನ್ನು ಅಂದಾಜು ರೂ. 141.50 ಕೋಟಿ ವೆಚ್ಚದಲ್ಲಿ</td></tr>
</table>

| | | |
|---|---|---|
| | ನಿರ್ಮಾಣಕ್ಕೆ ನೀಲನಕ್ಷೆ (Blue print) ಸಿದ್ಧವಾಗಿದೆಯೇ; ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ಮತ್ತು ಕಾಮಗಾರಿ ಯಾವಾಗ ಪ್ರಾರಂಭವಾಗಲಿದೆ; | ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು Feasibility report ಪಡೆಯಲು ಕ್ರಮವಹಿಸಲಾಗಿದೆ. ತೋಟಗಾರಿಕೆ ಇಲಾಖೆಯಿಂದ ಚಿಕ್ಕಬಳ್ಳಾಪುರ ಸಮಿತಿಗೆ ಹಸ್ತಾಂತರಗೊಂಡಿರುವ 20.00 ಎಕರೆ ಜಮೀನನಲ್ಲಿ, ಮೊದಲ ಹಂತದಲ್ಲಿ RIDF-31 ರಡಿ ರೂ. 20.00 ಕೋಟಿಗಳ ವೆಚ್ಚದಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯಲು ಸಹಕಾರ ಇಲಾಖೆಯಿಂದ ಕ್ರಮವಹಿಸಲಾಗಿದೆ. |
| **ಈ)** | ಬೆಂಗಳೂರಿನ GKVK (ಗಾಂಧಿ ಕೃಷಿ ವಿಜ್ಞಾನ ಕೇಂದ್ರ) ಆವರಣದಲ್ಲಿ ಅಂತರಾಷ್ಟ್ರೀಯ ಪ್ರಸ್ತುತ ಕತ್ತರಿಸಿದ ಹೂವಿನ ಮಾರುಕಟ್ಟೆ (Intenational Cut Flower Market) ಸ್ಥಾಪಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ ಮತ್ತು ಪರಿಸರವಾದಿಗಳ ವಿರೋಧದ ನಡೆವೆಯೂ ಈ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಪರ್ಯಾಯ ಕ್ರಮಗಳನ್ನು ಕೈಗೊಂಡಿದೆಯೇ; | ಬೆಂಗಳೂರಿನ GKVK (ಗಾಂಧಿ ಕೃಷಿ ವಿಜ್ಞಾನ ಕೇಂದ್ರ) ಆವರಣದಲ್ಲಿ ಅಂತರಾಷ್ಟ್ರೀಯ ಪ್ರಸ್ತುತ ಕತ್ತರಿಸಿದ ಹೂವಿನ ಮಾರುಕಟ್ಟೆ (International Cut Flower Market) ಸ್ಥಾಪಿಸುವ ಕುರಿತು ಕ್ರಮ ವಹಿಸಲಾಗುತ್ತಿದೆ.<br><br>ಈ ಮಧ್ಯೆ ಮಾನ್ಯ ಶಾಸಕರು, ಯಲಹಂಕ ವಿಧಾನ ಸಭಾ ಕ್ಷೇತ್ರ ಇವರು ಮಾರುಕಟ್ಟೆ ಸ್ಥಾಪನೆಯನ್ನು ಕೈಬಿಡಲು ಸರ್ಕಾರವನ್ನು ಕೋರಿರುತ್ತಾರೆ.<br><br>ಹಲವಾರು ಪರಿಸರ ಪ್ರೇಮಿಗಳು ಮಾರುಕಟ್ಟೆ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿರುತ್ತಾರೆ.<br><br>ಶ್ರೀ ನಿಶಾಂತ್ ಜೈನ್ ಬಿನ್ ಶ್ರೀ ಬಾಹುಬಲ್ ಜೈನ್, ವಿದ್ಯಾರಣ್ಯಪುರ ನಿವಾಸಿ ಇವರು ಅಧ್ಯಕ್ಷರು, The Bangalore Urban District Tree Authority ರವರಲ್ಲಿ ದಾವೆ ಹೂಡಿರುತ್ತಾರೆ.<br><br>ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸಹಕಾರ ಇಲಾಖೆಯಿಂದ ಪರಿಶೀಲನೆ ನಡೆಸಲಾಗುತ್ತಿದೆ. |
| **ಉ)** | ಹೂವು ಬೇಗನೆ ಬಾಡಿ ಹೋಗುವುದರಿಂದ ರೈತರಿಗಾಗುವ ನಷ್ಟ ತಪ್ಪಿಸಲು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ "ಪುಷ್ಪ ಸಂಸ್ಕರಣಾ ಘಟಕ"(Flower Processing Centre) ಸ್ಥಾಪಿಸುವ ಯೋಜನೆ ಸರ್ಕಾರದ ಮುಂದಿದೆಯೇ? | ಪ್ರಸ್ತುತ, ಸದರಿ ಯೋಜನೆಯ ಅನುಷ್ಠಾನದ ಕುರಿತಂತೆ ಸಮಿತಿಯು ಹೊಂದಿರುವ 20.00 ಎಕರೆ ಜಾಗದಲ್ಲಿ ಶೈತ್ಯಾಗಾರ ಸ್ಥಾಪನೆಗೂ ಸ್ಥಳಾವಕಾಶ ಕಲ್ಪಿಸಲಾಗಿದ್ದು, ಮುಂದಿನ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಶೈತ್ಯಾಗಾರ ಸ್ಥಾಪನೆಗೆ ಕ್ರಮವಹಿಸಲಾಗುವುದು ಹಾಗೂ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು-2004ರ ನಿಯಮ-24ರಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಶೈತ್ಯಾಗಾರ ಸ್ಥಾಪನೆಗೆ ಆಸಕ್ತಿ ಹೊಂದಿ ಅರ್ಜಿ ಸಲ್ಲಿಸುವ ಖಾಸಗಿ ಉದ್ದಿಮೆದಾರರಿಗೆ/ವರ್ತಕರಿಗೆ/ಸಂಘ ಸಂಸ್ಥೆಗಳಿಗೆ ನಿವೇಶನ ದರದ 50%ರ ರಿಯಾಯಿತಿ ದರದಲ್ಲಿ ಹಂಚಿಕೆಗೆ ಈಗಾಗಲೇ ಅವಕಾಶ ಕಲ್ಪಿಸಲಾಗಿರುತ್ತದೆ. ಪುಷ್ಪ ಸಂಸ್ಕರಣಾ ಘಟಕ (Flower processing centre) ಸ್ಥಾಪಿಸಲು ಪ್ರಸ್ತುತ ಯೋಜನೆಯಲ್ಲಿ ಪರಿಗಣಿಸಿರುವುದಿಲ್ಲ. ಬೇಡಿಕೆಗೆ ಅನುಗುಣವಾಗಿ ಮುಂದಿನ ಹಂತದಲ್ಲಿ ಸಹಕಾರ ಇಲಾಖೆಯಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು. |

ಸಂಖ್ಯೆ: HORTI 166 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು